ವಿಪರೀತ ಬಿಜಿಯಿಂದಾಗಿ ಫೋನು ಮಾಡಲು ಸಾಧ್ಯವಾಗಲಿಲ್ಲ. ನಮ್ಮ ನರಸಿಂಹರೆಡ್ಡಿ ಆತಿಥ್ಯದಲ್ಲಿ ಕರಡಿಯಿದ್ದಂತೆ. ಒಳ್ಳೆ ಮನುಷ್ಯ. ನಾಳೆ ಹೇಗೂ ಬರ್ತೀಯಲ್ಲ ಸಿಗ್ತೀನಿ. ಅಂತೂ ಹೈದರಾಬಾದಿಗೆ ಬಂದ ಕೆಲಸ ಮುಗಿಸಿದ್ದೀಯ. ಥ್ಯಾಂಕ್ಸ್ ಎ ಲಾಟ್. ಅಂದಂಗೆ ನಮ್ಮ ಕಂಪನಿಗೆ ಪ್ರತಾಪಸಿಂಹರೆಡ್ಡಿ ಕೂಡಾ ಪ್ರಮುಖ ಡೈರೆಕ್ಟರ್..." ಎಂದು ನನ್ನ ಉತ್ತರಕ್ಕೂ ಕಾಯದೆ ಫೋನು ಕಟ್ ಮಾಡಿದ್ದ.

ನಾನು ಶಾರ್ಪ್ ಎಂಟೂವರೆಗೆ 909ನೇ ರೂಮಿನ ಬಾಗಿಲು ತಟ್ಟಿದ್ದೆ. ಸುಮಾರು ನಲವತ್ತು ನಲವತ್ತೈದು ವರ್ಷದ ವಯಸ್ಸಿನ ವ್ಯಕ್ತಿಯೊಬ್ಬರು ಬಾಗಿಲು ತೆರೆದಿದ್ದರು. ನರಸಿಂಹರೆಡ್ಡಿ ಕಾಣಲಿಲ್ಲ.

"ಸಾರ್ ರೆಸ್ಟ್‌ರೂಮಿನಲ್ಲಿದ್ದಾರೆ ಕೂತುಕೊಳ್ಳಿ..." ಎನ್ನುವುದಕ್ಕೂ ರೆಸ್ಟ್‌ರೂಮಿನಿಂದ ನರಸಿಂಹರೆಡ್ಡಿ ಹೊರ ಬರುವುದಕ್ಕೂ ಒಂದೇ ಆಗಿತ್ತು. ನಾನು ಮಧ್ಯಾಹ್ನ ಕುಳಿತಿದ್ದ ಸೋಫಾದ ಮೇಲೆಯೇ ಕುಳಿತಿದ್ದೆ. ಅವರು ಹಾಸಿಗೆಯ ಬದಲು ನನ್ನ ಎದುರಿಗಿನ ಸೋಫಾದ ಮೇಲೆ ಕುಳಿತಿದ್ದರು. "ಬೈ ದಿ ಬೈ ಇವನು ನಮ್ಮ ಹುಡುಗ. ಅದೇ, ಬ್ಲೂ ಸೀ ಫಿಶ್ ಹೋಟೆಲ್ ಇದೆಯಲ್ಲ ಅದರ ಓನರ್. ಕೇರಳದಿಂದ ಇಪ್ಪತ್ತು ವರ್ಷಗಳ ಹಿಂದೆ ಚೆಫ್ ಆಗಿ ಬಂದವನು. ಇವೊತ್ತು ಒಂದಿಪ್ಪತ್ತು ಕೋಟಿ ಒಡೆಯ..." ಎಂದು ಆ ವ್ಯಕ್ತಿಯನ್ನು ಪರಿಚಯಿಸಿದ್ದರು ನಗುತ್ತಾ. ಆ ವ್ಯಕ್ತಿ ವಿನಮ್ರನಾಗಿ ಟೀಪಾಯಿಯ ಮೇಲೆ ಆಕರ್ಷಕವಾದ ಎರಡು ಬಿಯರ್ ಮೊಗ್ ಇಟ್ಟು, ಸುಮಾರು ಐದು ಲೀಟರ್ ಹಿಡಿಯುವಷ್ಟು ಇದ್ದ ಬಂಗಾರ ಬಣ್ಣದ ಕೋಲ್ಡ್ ಕಂಟೈನರ್‌ನಿಂದ ಎರಡಕ್ಕೂ ಬಿಯರ್ ಬಗ್ಗಿಸಿದ್ದ. ನಂತರ ಎರಡು ಪ್ಲೇಟ್ ಇಟ್ಟು ಹಾಟ್ ಬಾಕ್ಸಿನಿಂದ ಹೊಗೆಯಾಡುತ್ತಿದ್ದ ಫಿಶ್ ಫ್ರೈ ತುಂಡುಗಳನ್ನು ಇಟ್ಟಿದ್ದ. ಚಿಯರ್ಸ್ ಹೇಳಿ ಇಬ್ಬರೂ ಬಿಯರ್ ಬಾಯಿಗಿಟ್ಟುಕೊಂಡಿದ್ದೆವು. ಬಿಯರ್ ರುಚಿ ಒಂಥರಾ ಡಿಫರೆಂಟ್ ಆಗಿತ್ತು. ಫಿಶ್ ಫ್ರೈ ಅದ್ಭುತವಾಗಿತ್ತು.

"ನಿನ್ನ ಹೆಸರೇನು, ಇಂಥ ಫಿಶ್ ಫ್ರೈನ ಇದುವರೆಗೂ ನಾನು ತಿಂದೆ ಇರಲಿಲ್ಲ..." ಮೆಚ್ಚುಗೆ ವ್ಯಕ್ತಪಡಿಸಿದ್ದೆ.

"ನನ್ನ ಹೆಸರು ಕರುಣಾಕರ ನಾಯರ್. ಕರುಣ ಅಂದ್ರೆ ಸಾಕು. ಅಣ್ಣಾವ್ರು ನಿಮ್ಮ ಬಗ್ಗೆ ಹೇಳಿದ್ದಾರೆ. ಹೈದರಾಬಾದ್‌ಗೆ ಬರಿಗಾಲಲ್ಲಿ ಬಂದವನು ನಾನು. ಎಲ್ಲಾ ಅಣ್ಣಾವ್ರ ದಯೆ. ಹೋಟೆಲ್ ಜಾಗಾನ ಇಪ್ಪತ್ತು ವರ್ಷಗಳ ಹಿಂದೆ ಫ್ರೀಯಾಗಿ ಕೊಟ್ರು. ಇವೊತ್ತು ಹೈದರಾಬಾದಿನಲ್ಲಿ ನನಗೆ ಒಂದಿಷ್ಟು ಗುರುತು ಬರ್ಲಿಕ್ಕೆ ಅಣ್ಣಾವ್ರ ಕಾರಣ..." ಕರುಣಾಕರ ನಾಯರ್ ಮಾತು ಮಾತಿಗೂ ನರಸಿಂಹರೆಡ್ಡಿಯನ್ನು ಅಣ್ಣಾ ಅಣ್ಣಾ ಎಂದು ಸಂಬೋಧಿಸುತ್ತಿದ್ದದ್ದು ಅವನ ಋಣಭಾರದ ತೀವ್ರತೆಯನ್ನು ತೋರುತ್ತಿತ್ತು. ಖಾಲಿಯಾಗಿದ್ದ ಮೊಗ್‌ಗಳಿಗೆ ಮತ್ತೆ ಬಿಯರ್ ತುಂಬಿ ಅರ್ಧ ಗಂಟೆಯ ನಂತರ ಬರುವುದಾಗಿ ಹೇಳಿ ಹೊರಟ ಕರುಣಾಕರ ನಾಯರ್.

"ಡೆಸ್ಟಿನಿ ಎಂದರೇನು?... ನೀವು ತುಂಬಾ ಓದಿಕೊಂಡಿರುವಿರಂತೆ. ನಮ್ಮ ವೇಮುಲಶಾಸ್ತ್ರಿಯಂತೂ ಮಾತು ಮಾತಿಗೂ ನಿಮ್ಮನ್ನು ನೆನೆಯುತ್ತಿರುತ್ತಾನೆ" ಎಂದು ಫಿಶ್ ಫ್ರೈ ಬಾಯಿಗಿಟ್ಟುಕೊಂಡಿದ್ದರು ನರಸಿಂಹರೆಡ್ಡಿ.

"ಕೆಲವು ಪದಗಳಿಗೆ ಥಿಯರಿಯಲ್ಲಿ ಅನೇಕ ಅರ್ಥಗಳಿವೆ. ಹಾಗೆ ನೋಡಿದರೆ ಯಾವ ಸಂಗತಿಗಳಿಗೂ ಒಂದು ನಿರ್ದಿಷ್ಟ ಅರ್ಥ ಕಲ್ಪಿಸಲು ಪ್ರಾಕ್ಟಿಕಲ್ ಆಗಿ ಸಾಧ್ಯವಾಗುವುದಿಲ್ಲ. ನಾವಿಬ್ಬರು ಹೀಗೆ ಕುಳಿತು ಬಿಯರ್ ಕುಡಿಯುತ್ತಾ ಫಿಶ್ ತಿನ್ನುವ ದೃಶ್ಯ ಗಂಟೆಯ ಹಿಂದೆ ನನ್ನ ಮೆದುಳಲ್ಲಿ ಸಾಸಿವೆ ಕಾಳಿನಷ್ಟು ಕೂಡ ರೂಪುಗೊಂಡಿರಲಿಲ್ಲಿ. ನನ್ನ ಪ್ರಕಾರ ವರ್ತಮಾನದಲ್ಲಿ ಒಡಮೂಡುವ ಪ್ರತಿಯೊಂದು ಕ್ಷಣವೂ ಡೆಸ್ಟಿನಿಯೇ..." ಹೇಳುವುದನ್ನು ನಿಲ್ಲಿಸಿ ಮೊಗ್‌ನಲ್ಲಿದ್ದ ಬಿಯರ್ ಖಾಲಿ ಮಾಡಿದ್ದೆ. ನರಸಿಂಹರೆಡ್ಡಿ ತಾವೇ ಬಲವಂತದಿಂದ ಬಿಯರ್ ತುಂಬಿದ್ದರು.